ಒ ಎಸ್ ನಂ.04/2013
ಡಿಡಬ್ಲೂ-3

ದಿನಾಂಕ 27.07.2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಎಸ್‌ಟಿಆರ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಅಂಗವಾಗಿ ಇಂದು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದರಲ್ಲಿ ಎಲ್ಲ ವಿಷಯಗಳು ತಿಳಿದ ನಂತರ ನಾನು ಹೆಬ್ಬಟ್ಟಿನ ಸಹಿ ಮಾಡಿರುತ್ತೇನೆ.

ಪಾಟಿ ಸವಾಲುಃ ವಾದಿ ಪರ ಶ್ರಿ ಎಸ್‌ಜಿಹೆಚ್ ವಕೀಲರಿಂದ

ದಾವಾ ಆಸ್ತಿಗಳು ನಮ್ಮ ಹಿರಿಯರಿಂದ ಬಂದ ಆಸ್ತಿಗಳಿರುತ್ತವೆ. ಸದರಿ ಆಸ್ತಿಗಳಲ್ಲಿ ನನಗಾಗಲಿ, ವಾದಿಗಾಗಲಿ ಉಳಿದ ಪ್ರತಿವಾದಿಯರು ಹಿಸ್ಸೆ ನೀಡಿಲ್ಲ. ಪ್ರತಿವಾದಿ ನಂ.1 ರವರು ಮಿಲಿಟರಿ ಸೇವೆಯಲ್ಲಿದ್ದರು ಎಂದರೆ ಸರಿ. ಕಾರಣ ದಾವಾ ಆಸ್ತಿಗಳ ಉತಾರೆಗಳಲ್ಲಿ ನನ್ನ ತಂದೆ ಹೆಸರುಗಳ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿ. ಬಡದಾಳ ಗ್ರಾಮದ ಸೀಮಾಂತರದಲ್ಲಿ ಬರುವ ಸರ್ವೆ ನಂ.65ಟಿ ಮತ್ತು ಟಾ ಇವುಗಳು ಗೌಂಟಾಣ ಜಾಗೆಯಿದ್ದು ನನ್ನ ತಂದೆಯು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದನು ಎಂದರೆ ಸರಿ. ಆನಂತರ ಸದರಿ ಜಮೀನನ್ನು ನನ್ನ ತಂದೆ ಪ್ರತಿವಾದಿ ನಂ.1 ಮತ್ತು 2 ರವರ ಹೆಸರಿನಲ್ಲಿ ಮಾಡಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿಗಳನ್ನು ಪ್ರತಿವಾದಿ ನಂ.1 ರಿಂದ 3 ರವರು ವಾಟ್ನಿ ಮಾಡಿಕೊಳ್ಳುವ ಸಮಯದಲ್ಲಿ ನನಗಾಗಲಿ, ವಾದಿಗಾಗಲಿ ತಿಳಿಯದಂತೆ ಮಾಡಿಕೊಂಡಿರುತ್ತಾರೆ. ವಾದಿಯು ಮುಪ್ಪಾವಸ್ಥೆಯಲ್ಲಿದ್ದು ಆವಳನ್ನು ನಾನು ಮತ್ತು ನನ್ನ ಸಹೋದರಿಯರಾದ ಪ್ರತಿವಾದಿ ನಂ.4 ಮತ್ತು 6 ರವರು ನೋಡಿಕೊಳ್ಳುತಿದ್ದೇವೆ.

ಪಾಟಿ ಸವಾಲುಃ ಪ್ರತಿವಾದಿ ನಂ.3 ರವರ ಪರ ಶ್ರೀ ಸಿಎಸ್‌ಹೆಚ್ ವಕೀಲರಿಂದಃ

ಅರ್ಜುಣಗಿ ಗ್ರಾಮದ ಸರ್ವೆ ನಂ.52/ಎ ಇದನ್ನು ನನ್ನ ತಂದೆಯೇ ಪ್ರತಿವಾದಿ ನಂ.3 ರವರ ಹೆಸರಿನಲ್ಲಿ ಮಾಡಿರುತ್ತಾನೆ. ಆ ದಿನದಿಂದ ಇಲ್ಲಿಯವರೆಗೂ ಪ್ರತಿವಾದಿ ನಂ.3 ರವರೇ ಸದರಿ ಜಮೀನನ್ನು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ.

ಬಡದಾಳ ಗ್ರಾಮದ ಸರ್ವೆ ನಂ.65ಟ ಮತ್ತು ಟಾ ಇವುಗಳನ್ನು ನನ್ನ ತಂದೆಯೇ ಪ್ರತಿವಾದಿ ನಂ.1 ಮತ್ತು 2 ರವರ ಹೆಸರಿನಲ್ಲಿ ಮಾಡಿರುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿ. ನನ್ನ ತಂದೆಯ ಜೀವಿತದ ಅವಧಿಯಲ್ಲೇ ದಾವಾ ಆಸ್ತಿಗಳನ್ನು ಪ್ರತಿವಾದಿ ನಂ.1 ರಿಂದ 3 ರವರಿಗೆ ನನ್ನ ತಂದೆ ಹಂಚಿಕೊಟ್ಟಿರುತ್ತಾರೆ.

ಸೋಲಾಪೂರದಲ್ಲಿರುವ ಪ್ರತಿವಾದಿ ನಂ.3 ರವರಿಗೆ ಸಂಬಂಧಿಸಿದ ಮನೆ ನಂ.2175/ಎ-3 ಇದು ಪ್ರತಿವಾದಿ ನಂ.3 ರವರ ಸ್ವಯಾರ್ಜಿತ ಆಸ್ತಿ ಇರುತ್ತದೆ. ಅದರಂತೆ ಸೋಲಾಪೂರದಲ್ಲಿರುವ ನಿವೇಶನ ಸಂ.229 ಇದು ಪ್ರತಿವಾದಿ ನಂ.3 ರವರ ಹೆಂಡತಿಯ ಸ್ವಯಾರ್ಜಿತ ಆಸ್ತಿ ಇರುತ್ತದೆ. ನನಗೆ ಬರಬೇಕಾದ ಹಿಸ್ಸೆ ತರಿಕ ಕೊಡಬೇಕಾದ ಆಸ್ತಿಯ ಬದಲಿಗೆ ನನ್ನ ಮದುವೆ ಸಮಯದಲ್ಲಿ ಹಣ ಮತ್ತು ಬಂಗಾರ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಪ್ರತಿವಾದಿ ನಂ.1 ಮತ್ತು 2 ರವರ ಪರ ಶ್ರೀ ಪಿಬಿಪಿ ವಕೀಲರು ಕಾಲಾವಕಾಶ ಕೋರಲಾಗಿದ್ದು ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪೂರ